ಕಾವ್ಯ

# ಯಾರು ಬಿಟ್ಟು ಹೋದ ಚಿಹ್ನೆಗಳು




ಕಡಲಿಗೆ ಬಿದ್ದ ಕಣ್ಣ ನೀಲಿ
ಸಮುದ್ರವಾಯಿತೆ–
ಮಿಲಿಯಾಂತರ ಉಲ್ಕಾಪಾತಗಳ
ಕೊಲೆಯಾಗಿ ಸಮುದ್ರ ತುಂಬಿಹೋಯಿತೆ?
ನಮ್ಮೂರ ಗಿಡ ಮರ, ಕೆರೆ ಕುಂಟೆ, ಬೆಟ್ಟಗುಡ್ಡ
ಭೂಮಿ ಆಕಾಶ ಬ್ರಹ್ಮಾಂಡ–
ಕಣ್ಣ ನೀಲಿಯೊಳಗೆ ಸೇರಿಕೊಂಡಿದ್ದೇಗೆ?

ಭೂಮಿಗೆ ಬೆಂಕಿ ಬಿದ್ದಾಗೆಲ್ಲ
ಓಡಿ ಬರುವ ಕಡಲು–
ಸೂರ್ಯನಿಂದ ಬೆಳಕು ತಂದು, ಮಣ್ಣಿನಿಂದ
ಕಪ್ಪು ಆಮ್ಮೈನೊಆಸಿಡ್ ತಿಂದು ನೇಯ್ದುಕೊಂಡಿದ್ದೇಗೆ
ತನ್ನ ಸುತ್ತಲ ಜೀವಜಾಲ.

ಕೋರಲ್ ಬಣ್ಣಗಳ, ಮೀನ ಕಣ್ಣುಗಳ
ಗುರುತ್ವಕ್ಕೆ ತಕಥೈ ತಕಥೈ ಕುಣಿವ
ಸಮುದ್ರದಲೆಗಳ ಮೇಲೆ–
ಹೋಗಿಬರುವವರು ಯಾರು? ದೇವಲೋಕಕ್ಕೆ
ನೀಲಿ ರಥಗಳಲ್ಲಿ?

ಇಲ್ಲಿದ್ದವರೆಲ್ಲ ಎಲ್ಲಿಗೆ ಹೋಗವರು,
ಇಲ್ಲಿಗೆ ಬಂದವರೆಲ್ಲ ಎಲ್ಲಿದ್ದವರು–
ಬಸ್ಸು ಕಾರು ರೈಲು ವಿಮಾನಗಳು;
ಗಿಡ ಮರ ಕೆರೆ ಕುಂಟೆ ಬೆಟ್ಟ ಗುಡ್ಡಗಳೆಲ್ಲ
ಯಾರು ಬಿಟ್ಟುಹೋದ ಚಿಹ್ನೆಗಳು?

❖ ಡಾ.ಎಂ.ವೆಂಕಟಸ್ವಾಮಿ